# ‘ತೃತೀಯ ಲಿಂಗ’ದ ಸ್ಥಾನಮಾನ

ಗಂಡೂ ಅಲ್ಲದ, ಹೆಣ್ಣೂ ಅಲ್ಲದ ಲೈಂಗಿಕ ಅಲ್ಪಸಂಖ್ಯಾತ ಸಮುದಾಯಕ್ಕೆ ‘ತೃತೀಯ ಲಿಂಗ’ದ ಕಾನೂನು ಸ್ಥಾನಮಾನವನ್ನು ಒದಗಿಸಿ ಸುಪ್ರೀಂಕೋರ್ಟ್ ತೀರ್ಪು ನೀಡಿರುವುದು ಸ್ವಾಗತಾರ್ಹ. ಈ ತೀರ್ಪಿನ ಮೂಲಕ ಲೈಂಗಿಕ ಅಲ್ಪಸಂಖ್ಯಾತರು ಇತರ ನಾಗರಿಕರಂತೆಯೇ ಸಮಾನ ಹಕ್ಕುಗಳನ್ನು ಹೊಂದಿ, ಸಮಾಜದ ಮುಖ್ಯವಾಹಿನಿಯಲ್ಲಿ ತಲೆ ಎತ್ತಿ ನಡೆಯಲು ಕಾನೂನುಬದ್ಧ ಅವಕಾಶ ಒದಗಿಸಿದಂತಾಗಿದೆ. ಲೈಂಗಿಕ ಅಲ್ಪಸಂಖ್ಯಾತರ ಮಾನವ ಹಕ್ಕುಗಳನ್ನು ಮತ್ತು ನಾಗರಿಕ, ರಾಜಕೀಯ ಹಕ್ಕುಗಳನ್ನು ರಕ್ಷಿಸಲು ಈ ತೀರ್ಪು ನೆರವಾಗಲಿದೆ. ಸಮಾನ ಹಕ್ಕುಗಳು ಮತ್ತು ನ್ಯಾಯಬದ್ಧ ಸೌಲಭ್ಯಗಳಿಗಾಗಿ ಲೈಂಗಿಕ ಅಲ್ಪಸಂಖ್ಯಾತರು ಕಳೆದ ಹಲವು ವರ್ಷಗಳಿಂದ ಕೋರ್ಟಿನ ಒಳಗೆ ಮತ್ತು ಹೊರಗೆ ತಮ್ಮ ಹೋರಾಟವನ್ನು ನಡೆಸಿದ್ದಕ್ಕೆ ಕೊನೆಗೂ ಜಯ ಸಿಕ್ಕಂತಾಗಿದೆ. ಚುನಾವಣಾ ಆಯೋಗದ ದಾಖಲೆಗಳಲ್ಲಿ ತೃತೀಯ ಲಿಂಗವನ್ನು ಸೂಚಿಸುವ ಕಾಲಂಗಳನ್ನು ಈ ಮೊದಲೇ ನಮೂದಿಸಲಾಗಿದೆ. ಆದರೆ ಸರಕಾರದ ಇತರ ಸೌಲಭ್ಯಗಳಲ್ಲಿ ಅವರಿಗೆ ಸ್ಪಷ್ಟ ಮಾನ್ಯತೆ ಸಿಕ್ಕಿರಲಿಲ್ಲ. ಇನ್ನು ಮುಂದೆ ಪಾಸ್‌ಪೋರ್ಟ್, ಚಾಲನಾ ಪರವಾನಗಿ, ರೇಷನ್ ಕಾರ್ಡ್‌ಗಳಲ್ಲೂ ಲೈಂಗಿಕ ಅಲ್ಪಸಂಖ್ಯಾತರು ತಮ್ಮನ್ನು ತೃತೀಯ ಲಿಂಗಿಗಳು ಎಂದು ನಮೂದಿಸಲು ಪ್ರತ್ಯೇಕ ಕಾಲಂ ಒದಗಿಸಬೇಕಾಗುತ್ತದೆ.  ತೃತೀಯ ಲಿಂಗಿಗಳ ಗುರುತಿಸುವಿಕೆಗೆ ಈಗ ಸಾಂವಿಧಾನಿಕ ಮಾನ್ಯತೆ ನೀಡಿದಂತಾಗಿದೆ.


ಈ ಐತಿಹಾಸಿಕ ತೀರ್ಪಿನ ಮೂಲಕ ಸುಪ್ರೀಂಕೋರ್ಟ್ ವ್ಯಕ್ತಿಯೊಬ್ಬನಿಗೆ ತನ್ನ ಲಿಂಗತ್ವವನ್ನು ಸ್ಪಷ್ಟವಾಗಿ ಗುರುತಿಸುವ ವ್ಯಕ್ತಿಗತ ಹಕ್ಕನ್ನು ನೀಡಿದಂತಾಗಿದೆ. ಲಿಂಗ ಸ್ವಾತಂತ್ರ್ಯದ ಹೊಸ ಆಲೋಚನೆಗೆ ಸಾಂವಿಧಾನಿಕ ಮಾನ್ಯತೆ ಸಿಕ್ಕಿರುವುದು  ನಮ್ಮ ಸಮಾಜದ ರೂಢಿಗತ ಸಾಂಪ್ರದಾಯಿಕ ನಿಲುವುಗಳನ್ನೂ ಸಡಿಲಿಸಬಹುದು. ಲೈಂಗಿಕ ಅಲ್ಪಸಂಖ್ಯಾತರ ಬಗ್ಗೆ ಈಗ ಸಮಾಜದಲ್ಲಿ ಒಂದು ರೀತಿಯ ತಾರತಮ್ಯದ ಭಾವನೆ ಇದೆ. ‘ಪುರುಷರೂ ಅಲ್ಲ, ಸ್ತ್ರೀಯರೂ ಅಲ್ಲ’ ಎನ್ನುವುದನ್ನು ನಮ್ಮ ಸಮಾಜ ಅವಹೇಳನದ ಸಂಗತಿಯಾಗಿ ಪರಿಗಣಿಸಿದೆ. ತೃತೀಯ ಲಿಂಗವೆಂಬ ಕಾನೂನುಬದ್ಧ ಮಾನ್ಯತೆ ನೀಡಿದಾಕ್ಷಣ ಸಮಾಜದ ಈ ಅವಹೇಳನ ಮನೋಭಾವ ತೊಲಗುತ್ತದೆ ಎಂದು ನಿರೀಕ್ಷಿಸಲಾಗದು. ಆದರೆ ಈ ಮನೋಭಾವವನ್ನು ತೊಲಗಿಸುವ ನಿಟ್ಟಿನಲ್ಲಿ ಕೈಗೊಳ್ಳುವ ಸಾಮಾಜಿಕ ಕ್ರಮಗಳನ್ನು ಬಲಪಡಿಸಲು ಈ ತೀರ್ಪು ನೆರವಾಗಲಿದೆ.

ನೆರೆಯ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ನೇಪಾಳ ಸರಕಾರಗಳು ತೃತೀಯ ಲಿಂಗಿಗಳಿಗೆ ಮಾನ್ಯತೆ ನೀಡಲು ಈಗಾಗಲೆ ಕಾನೂನುಗಳನ್ನು ತಂದಿದ್ದು, ಭಾರತ ತಡವಾಗಿ ಈ ನಿರ್ಧಾರ ಕೈಗೊಂಡಿದೆ. ಇನ್ನೀಗ ಸಲಿಂಗ ಕಾಮವನ್ನು ಅಪರಾಧ ಎಂದು ಘೋಷಿಸಿರುವ ಭಾರತೀಯ ದಂಡ ಸಂಹಿತೆಯ 377ನೇ ಕಲಮು ತಿದ್ದುಪಡಿಯಾಗಬೇಕಾದ ಅನಿವಾರ್ಯತೆಯೂ ಸೃಷ್ಟಿಯಾಗಿದೆ. ಲೈಂಗಿಕ ಅಲ್ಪಸಂಖ್ಯಾತರನ್ನು ತೃತೀಯ ಲಿಂಗಿಗಳೆಂದು ಪರಿಗಣಿಸಿದ ಬಳಿಕ, ಅವರ ವೈವಾಹಿಕ ಹಕ್ಕನ್ನು ಮಾನ್ಯತೆ ಮಾಡದೇ ಇದ್ದರೆ ಕಾನೂನು ವಿಧಿಗಳ ನಡುವೆ ವೈರುಧ್ಯ ಉಂಟಾಗಲಿದೆ. ಈ ವೈರುಧ್ಯವನ್ನು ಹೋಗಲಾಡಿಸಲು ಸರಕಾರ ಶೀಘ್ರವೇ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಿದೆ.

ಶಿಕ್ಷಣ, ಉದ್ಯೋಗ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ತೃತೀಯ ಲಿಂಗ ಸಮುದಾಯಕ್ಕೆ ಆದ್ಯತೆ ನೀಡಲು ಮತ್ತು ಮೀಸಲಾತಿಯಂತಹ ವಿಶೇಷ ಸೌಲಭ್ಯಗಳನ್ನು ಒದಗಿಸಲು ಕ್ರಮಗಳನ್ನು ಕೈಗೊಳ್ಳುವಂತೆಯೂ ಸುಪ್ರೀಂಕೋರ್ಟ್ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಸೂಚಿಸಿದೆ. ಉದ್ಯೋಗ ಕ್ಷೇತ್ರದಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಸಮನಾಗಿ ದುಡಿಯುವ ಅವಕಾಶ ಸಿಕ್ಕಿದರೆ ತೃತೀಯ ಲಿಂಗಿಗಳು ಭಿಕ್ಷಾಟನೆಯಂತಹ ಪ್ರವೃತ್ತಿಗಳಿಂದ ದೂರ ಸರಿಯುವುದು ಖಂಡಿತ. ಅವರ ದೈಹಿಕ ಸಾಮರ್ಥ್ಯದ ಸಮರ್ಪಕ ಸದ್ಬಳಕೆಗೂ ಹೊಸ ದಾರಿಗಳು ತೆರೆದುಕೊಳ್ಳಬಹುದು. ಸುಪ್ರೀಂಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿರುವ ಈ ಸದ್ಭಾವನೆಯನ್ನು ನಮ್ಮ ಸಮಾಜವೂ ಗುರುತಿಸಬೇಕಿದೆ. ತೃತೀಯ ಲಿಂಗಿಗಳ ವಿರುದ್ಧದ ತಾರತಮ್ಯ ಭಾವನೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಹಲವು ಸ್ವಯಂಸೇವಾ ಸಂಸ್ಥೆಗಳು ಕೈಗೊಂಡಿರುವ ಕ್ರಮಗಳ ಜತೆ ಎಲ್ಲರೂ ಕೈಜೋಡಿಸಬೇಕಿದೆ. ಆಗ ಮಾತ್ರ ಹಿಜಡಾ, ನಪುಂಸಕರು, ಅರವಾನಿಸ್, ಜೋಗತಿ, ಶಿವಶಕ್ತಿ ಮುಂತಾಗಿ ಗುರುತಿಸಲ್ಪಡುವ ತೃತೀಯ ಲಿಂಗಿಗಳು ಸಾಮಾಜಿಕ ಕ್ಲೇಶಗಳಿಂದ ದೂರವಾಗಿ ಮುಖ್ಯಪ್ರವಾಹವನ್ನು ಸೇರಿಕೊಳ್ಳುವುದು ಸಾಧ್ಯವಾಗಬಹುದು.

■ ಬಿ.ಎಂ.ಹನೀಫ್

‘ಪುರುಷರೂ ಅಲ್ಲ, ಸ್ತ್ರೀಯರೂ ಅಲ್ಲ’ ಎನ್ನುವುದನ್ನು ನಮ್ಮ ಸಮಾಜ ಅವಹೇಳನದ ಸಂಗತಿಯಾಗಿ ಪರಿಗಣಿಸಿದೆ. ತೃತೀಯ ಲಿಂಗವೆಂಬ ಕಾನೂನುಬದ್ಧ ಮಾನ್ಯತೆ ನೀಡಿದಾಕ್ಷಣ ಸಮಾಜದ ಈ ಅವಹೇಳನ ಮನೋಭಾವ ತೊಲಗುತ್ತದೆ ಎಂದು ನಿರೀಕ್ಷಿಸಲಾಗದು. ಆದರೆ ಈ ಮನೋಭಾವವನ್ನು ತೊಲಗಿಸುವ ನಿಟ್ಟಿನಲ್ಲಿ ಕೈಗೊಳ್ಳುವ ಸಾಮಾಜಿಕ ಕ್ರಮಗಳನ್ನು ಬಲಪಡಿಸಲು ಈ ತೀರ್ಪು ನೆರವಾಗಲಿದೆ.




ಈಶ್ವರ್